**PW**-05

**CW**- 09

**ದಿನಾಂಕಃ 01.07.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಎಸ್ ಜಿ ಹೆಚ್ ಅವರಿಂದಃ**

1. ಈ ದಿನ ಸಾಕ್ಷಿ ಹೇಳಲು ಜಗದೀಶನೆ ನಮ್ಮ 4 ಜನರನ್ನು ಕಳುಹಿಸಿಕೊಟ್ಟಿರುತ್ತಾನೆ ಎಂದರೆ ಸರಿ.
2. ನನ್ನ ಮನೆ ಜಗದೀಶನ ಮನೆಯ ಹತ್ತಿರ ಇಲ್ಲ ಎಂದರೆ ಸರಿ. ಸ್ವಲ್ಪ ದೂರದಲ್ಲಿದೆ. ಜಾತ್ರೆ ಇರುವ ಕಾರಣ ಆ ದಿನ ಇಡೀ ಊರಿನ ಜನರೇ ದೇವಸ್ಥಾನದ ಹತ್ತಿರ ಸೇರಿದ್ದರು ಎಂದರೆ ಸರಿ. ಟ್ರ್ಯಾಕ್ಟರಗಳನ್ನು ಎಲ್ಲಿ ಸಿಂಗಾರ ಮಾಡುತ್ತಿದ್ದರು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಜಾತ್ರೆ ಮೆರವಣಿಗೆಯನ್ನು ನೋಡಲು ರಾತ್ರಿ 10.00 ಗಂಟೆಗೆ ಹೋಗಿದ್ದೆ. ಮೆರವಣಿಗೆ ನಾನು ಹೋದಾಗ ಇನ್ನೂ ಹೋಗಿರಲಿಲ್ಲ.
3. ಫ್ರಾಸಾ-1 ಜಗದೀಶ ಆ ಸಮಯದಲ್ಲಿ ಎಲ್ಲಿ ಇದ್ದರೂ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅವರು ಮನೆಯ ಹತ್ತಿರ ಇದ್ದರು. ನಾನು ಹೋದಾಗ ಮನೆಗೆ ಊಟಕ್ಕೆ ಹೋಗಿದ್ದರು. ಆರೋಪಿತರ ಬಗ್ಗೆ ನನಗೆ ಪೂರ್ತಿ ಮಾಹಿತಿ ಇಲ್ಲ.
4. ದಿಃ 22.03.2022 ರಂದು 5.00 ಗಂಟೆಯ ಸುಮಾರಿಗೆ ವಡ್ಡರ ಓಣಿಯವರು ನೀರು ಬಿಡಲು ಫ್ರಾಸಾ-1 ಜಗದೀಶ ಅವರನ್ನು ಕೇಳಲು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಅವರ ಮದ್ಯೆ 5.00 ಗಂಟೆಗೆ ಜಗಳ ಆಗಿತ್ತು ಎಂದರೆ ಸರಿಯಲ್ಲ.
5. ಶೈಲಾ ವಡ್ಡರ ಫ್ರಾಸಾ-1 ಜಗದೀಶ ಹಾಗೂ ನನ್ನ ಅಣ್ಣತಮ್ಮಂದಿರ ಮೇಲೆ ದೂರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.
6. ಜಾತ್ರೆ ಇರುವ ಕಾರಣ ಜಗದೀಶನ ಮನೆಯ ಹತ್ತಿರ 200 - 300 ಜನ ಸೇರಿದ್ದರು ಎಂದರೆ ಸರಿ . ಆ ಸಮಯದಲ್ಲಿ , ಆ ಕಡೆ - ಈ ಕಡೆ ಏನಾಗುತ್ತದೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ. ರಾತ್ರಿ

10.00 ಗಂಟೆಗೆ ನಾನು ಗುಡಿಯ ಹತ್ತಿರ ಇದ್ದಾಗ ಗದ್ದಲ ಆದ ಕಾರಣ ಫ್ರಾಸಾ–1 ರವರ ಮನೆಗೆ ಹೋದೆ. ಆಗ ಇನ್ನೂ ಅಷ್ಟು ಜನ ಸೇರಿರಲಿಲ್ಲ. ನನಗೆ ಮೂರು ಜನ ಆರೋಪಿತರಲ್ಲಿ ಯಾರು ಫ್ರಾಸಾ–1 ಜಗದೀಶ ರವರಿಗೆ ಏನೂ ಮಾಡಿದರು ಎಂದು ಹೇಳಲು ಆಗುವುದಿಲ್ಲ.

**7.** ಫ್ರಾಸಾ–1 ಅವರ ಜೊತೆಗೆ ಆರೋಪಿತರುನೀರು ಬಿಡುವ ವಿಷಯದಲ್ಲಿ ಜಗಳಾಡಿದರು ಹಾಗೂ ಜಗದೀಶ ಅವರ ಅಂಗಿ ಹಿಡಿದು ಎಳೆದಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**8.** ನನಗೆ ಮತ್ತೆ ನನ್ನ ಚಿಕ್ಕಮ್ಮನಿಗೆ ಆರೋಪಿತರು ಕೈ ಹಿಡಿದು ದೂಡಾಡಿದರು. ಆರೋಪಿತರು ಕೈ ಹಿಡಿದು ದೂಡಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**9.** ನಾನು ಆರೋಪಿತರು ನನ್ನ ಹೆಣ್ಣು ತನದ ಮಾನಬಂಗ ಮಾಡಲು ಪ್ರಯತ್ನಿಸಿದರು ಎಂದು ಹೇಳಿರುವುದಿಲ್ಲ , ಅವರು ಕೇವಲ ನನ್ನ ಕೈ ಹಿಡಿದು ದೂಡಾಡಿರುತ್ತಾರೆ. ಚಾಸಾ–6 ರಿಂದ 8 ರವರು ಬಿಡಿಸಿಕ್ಕೊಳ್ಳಲು ಬಂದಾಗ ಆರೋಪಿತರು ಅವರಿಗೆ ಚಾಕುವಿನಿಂದ ಚುಚ್ಚಿ , ಗಾಯ ಪಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**10.** ಚಾಕು ಬೈಕನ ಬಾಕ್ಸನಲ್ಲಿ ಇತ್ತು. ನನಗೆ ಸದರಿ ಬೈಕ ಕಲರಾಗಲೀ , ಹೆಸರಾಗಲೀ ಗೊತ್ತಿಲ್ಲ. ಚಾಕು ಇದ್ದ ಬ್ಯಾಗ ಎಂತಹದ್ದು ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಆ ಬ್ಯಾಗನಲ್ಲಿ ಏನು ಇತ್ತು ಎಂದು ನಾನು ನೋಡಿಲ್ಲ.

**11.** ನಾನು ಬ್ಯಾಗನಲ್ಲಿ ಚಾಕು ಇತ್ತು ಎಂದು ಮಾತ್ರ ಹೇಳಿದ್ದು , ಕಂದಲಿ ಇತ್ತು ಎಂದು ನಾನು ಹೇಳಿಲ್ಲ. ಆರೋಪಿತರು ನನ್ನ ಜೊತೆಗಾಗಲೀ , ನಮ್ಮ ಚಿಕ್ಕಪ್ಪನ ಜೊತೆಯಾಗಲೀ ಜಗಳ ಮಾಡಿಲ್ಲ , ಯಾರಿಗೂ ಯಾವುದೇ ರೀತಿ ತೊಂದರೆ ಮಾಡದೇ ಇದ್ದರೂ , ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಊರಿನ ಹಿರಿಯರು ನಮ್ಮ ಚಿಕ್ಕಪ್ಪನಿಂದ ದೂರು ಕೊಡಿಸಿದ್ದಾರೆ ಎಂದರೆ ಸರಿಯಲ್ಲ.

12. ನಾನು ಆ ದಿನ ಆಸ್ಪತ್ರೆಗೆ ಚಿಕಿತ್ಸೆಗೆಂದು ಹೋಗಿಲ್ಲ. ಆ ವರ್ಷ ನಾನು ಜಾತ್ರೆಯನ್ನು ಮಾಡಿರುತ್ತೇವೆ. ಫ್ರಾಸಾ-1 ರವರ ಮನೆಗೆ ಬೀಗರು ಬಂದಿದ್ದು , ಅವರು ಜಾತ್ರೆಯನ್ನು ಮಾಡಿರುತ್ತಾರೆ.

13. ನಾನು ಪೋಲಿಸರಿಗೆ ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಹೇಳಿಕೆಯನ್ನು ನೀಡಿಲ್ಲ. ಆರೋಪಿತರು ನನ್ನ ಕೈ ಹಿಡಿದು ಎಳೆದಾಡಿಲ್ಲ , ನನ್ನ ಚಿಕ್ಕಪ್ಪನ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ಆರೋಪಿತರಿಗೂ ಘಟನೆಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

15. ಮುಮಾ-1 ಚಾಕುವಿಗೂ , ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಅದನ್ನು ಜಗದೀಶ ಅವರೇ ಇಟ್ಟಿದ್ದರು ಎಂದರೆ ಸರಿಯಲ್ಲ.

16. ಆರೋಪಿತರ ವಾಹನವನ್ನು 5.00 ಗಂಟೆಗೆ ಹಿಡಿದು ಇಟ್ಟಿದ್ದರು , ಅವುಗಳನ್ನು ದುರುಪಯೋಗ ಪಡಿಸಿಕೊಂಡು ಎಲ್ಲಿ ಆರೋಪಿತರು ನಮ್ಮ ಮೇಲೆ ಪ್ರಕರಣ ದಾಖಲಿಸುತ್ತಾರೆಂದು , ಸದರಿಯವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನ ಮೇಲೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ. ಸರಿ ಇದೆ.**

**(ಅಶ್ವಿನಿ ವಿಜಯ ಶಿರಿಯಣ್ಣನವರ)**
**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಎಫ್.ಟಿ.ಎಸ್.ಸಿ.-1, ಹಾವೇರಿ**